Sri B. D. JATTI.—Government is not at all feeling miserable.

Sri G. V. GOWDA.—Government is not bold to withstand the agitation that is sponsored.

Sri B. D. JATTI.—That is also not correct. That is the impression of the Hon'ble Member.

Sri H. R. KESHAVA MURTHY.—Are you going to appoint the Additional Deputy Commissioners for the bifurcated districts?

Sri B. D. JATTI.—It is wrong to think of Additional Deputy Commissioners being appointed when the bifurcation has not been taken up.

Construction of Tunga Upper dam and Varahi Hydro-Electric Schemes.

*Q.—405. Sri S. GOPALA GOWDA (Thirthahalli).—

Will the Government be pleased to state:—

(a) whether they have decided to take up the construction of Tunga Upper Dam and Varahi Hydro-Electric Schemes;

(b) whether they have made any survey, estimate, etc., relating to these schemes;

(c) the place where the Tunga Upper Dam is proposed to be constructed together with the quantity of water to be stored and the estimated cost of the said Scheme;

(d) whether it is a fact that they intend to increase the height of the present Tunga Dam;

(e) if so, to what extent it will be increased and the additional quantity of water that would be available thereby?

A.—Sri VEERENDRA PATIL (Minister for Public Works) [On behalf of SRI NIJALINGAPPA (Chief Minister)].

(a) Both under investigation.

(b) Survey is under progress in both the cases.

(c) The matter is under investigation.

(d) Being investigated.

(e) Does not arise in view of the answer to (d) above.

ಶ್ರೀ ಎಸ್. ಗೋಪಾಲ ಗೌಡ.—ಈ ಯೋಜನೆಗಳು ಪರಿಶೀಲನೆಯಲ್ಲಿವೆ ಎಂದು ತಿಳಿಸಿದ್ದೀರಿ, ಈ ಪರಿಶೀಲನೆ ಯಾವ ಮಟ್ಟದಲ್ಲಿ ಇದೆ ಎಂಬುದನ್ನು ಸರ್ಕಾರ ತಿಳಿಸುವುದಕ್ಕೆ ಆಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಯಾವ ಮಟ್ಟದಲ್ಲಿದೆ ಎಂದು. ವಿವರಗಳನ್ನು ಹೇಳಲಿಕ್ಕೆ ಆಗುವುದಿಲ್ಲ. ನಮ್ಮ ಹತ್ತಿರ ರಿಪೋರ್ಟ್ಸ್ ಬಂದಿಲ್ಲ. ಇನ್‌ವೆಸ್ಟಿಗೇಟ್ ಮಾಡುತ್ತಾ ಇದ್ದಾರೆ ರಿಪೋರ್ಟ್ ಬಂದ ಮೇಲೆ ಹೇಳಬಹುದು.

ಶ್ರೀ ಎಸ್. ಗೋಪಾಲ ಗೌಡ.—ಈಗ ಸರ್ಕಾರಕ್ಕೆ ತುಂಗಾ ಮೇಲ್ದಂಡೆಯ ಅಣೆಕಟ್ಟನ್ನು ಎಲ್ಲಿ ಕಟ್ಟಬೇಕು ಎಂಬ ವಿಷಯದಲ್ಲಿ ಆಗಲಿ ಅಥವಾ ಖರ್ಚಾಗುವ ಹಣದ ವಿಷಯದಲ್ಲಿ ಆಗಲಿ ಅಥವಾ ಎಷ್ಟು ನೀರನ್ನು ನಿಲ್ಲಿಸುತ್ತಾರೆ ಎಂಬ ವಿಷಯದಲ್ಲಿ ಆಗಲಿ ಅಥವಾ ಎಷ್ಟು ಪ್ರದೇಶ ಮುಳುಗಡೆ ಯಾಗುತ್ತದೆ ಎಂಬ ವಿಷಯದಲ್ಲಿ ಆಗಲಿ ವಿವರ ದೊರಕಿದೆಯೇ? ವರಾಹಿ ಪ್ರಾಜೆಕ್ಟ್‌ನ್ನು ಮಾಡ ಬೇಕೆಂಬುದು ಯಾವಾಗ ಸರ್ಕಾರದ ಮುಂದೆ ಮತ್ತು? ಸರ್ವೆ ಮಾಡುವುದನ್ನು ಯಾವಗ ಸರ್ಕಾರ ದವರು ಆರಂಭ ಮಾಡಿದರು? ಇನ್ನು ಎಷ್ಟು ಕಾಲ ಈ ಯೋಜನೆಗಳನ್ನು ಪರಿಶೀಲನೆ ಮಾಡುವುದರಲ್ಲೇ

(ಶ್ರೀ ಎಸ್. ಗೋಪಾಲ ಗೌಡ)

ಆಗುತ್ತದೆ ? ಮಾನ್ಯ ಸಚಿವರಿಗೆ ಇದರ ವಿವರಗಳು ಸಾಕಾದಷ್ಟು ಗೊತ್ತಿವೆ. ಆದರೆ ಅವರು ಯಾವ ಕಾರಣದಿಂದಲೋ ಏನೋ ವಿಷಯಗಳನ್ನು ಹೇಳುತ್ತಿಲ್ಲ. ನಮ್ಮನ್ನೆ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾ ಇದ್ದಾರೆ. ಆದ್ದರಿಂದ ಇಷ್ಟು ಪ್ರಶ್ನೆಗಳನ್ನು ಒಟ್ಟಿಗೆ ಹಾಕಿದೆ.

ಶ್ರೀ ವೀರೇಂದ್ರ ಪಾಟೀಲ್.—ತುಂಗಾ ಮೇಲ್ದಂಡೆ ಪ್ರಶ್ನೆ ಈಗಾಗಲೇ ಪರಿಶೀಲನೆ ಯಲ್ಲಿದೆ. ಅದರ ಸಲುವಾಗಿ ಯಾವ ಸಿಬ್ಬಂದಿ ಬೇಕಾಗಿತ್ತೋ ಅದನ್ನೆಲ್ಲಾ ಹಾಕಿದ್ದೇವೆ. ಅವರು ಈ ಕೆಲಸವನ್ನು ತೆಗೆದುಕೊಂಡಿದ್ದಾರೆ. ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆ ಎಷ್ಟು ನೀರನ್ನು ಉಪಯೋಗ ಮಾಡುತ್ತೇವೆ, ಕೆನಾಲ್ ಉದ್ದ ಎಷ್ಟು ಆಗುತ್ತದೆ, ಅಚ್ಚುಕಟ್ಟು ಎಷ್ಟು ಬರುತ್ತದೆ ಎಂಬುದು ಇನ್ ವೆಸ್ಟಿಗೇಷನ್ ಮಾಡಿದಮೇಲೆ ನಮಗೆ ವರದಿ ಬಂದಾಗ ಹೇಳಬಹುದೇ ಹೊರತು ಈಗ ಯಾವುದನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ನನ್ನ ಹತ್ತಿರ ಇಲ್ಲ. ವಿವರ ಗಳನ್ನು ಸಂಪೂರ್ಣ ಇನ್‌ವೆಸ್ಟಿಗೇಷನ್ ಆಗುವತನಕ ಕೊಡುವುದಕ್ಕೆ ಆಗುವುದಿಲ್ಲ. ವರಾಹಿ ಸ್ಕೀಂಬಗ್ಗೆ ಈಗಾಗಲೇ ಒಂದು ಪ್ರಿಲಿಮಿನರಿ ಸರ್ವೇ ಆಗಿದೆ, ಅದರ ಪ್ರಕಾರ 2 ಲಕ್ಷ 75 ಸಾವಿರ ಕಿಲೋವಾಟ್ ಪವರ್ ಜನರೇಟ್ ಆಗುತ್ತದೆ ಒಂದು ರಫ್ ಎಸ್ಟಿಮೇಟ್ ಆಗಿದೆ. ವಿವರವಾದ ಇನ್‌ವೆಸ್ಟಿಗೇಷನ್ ವರ್ಕ್ ಈಗಾಗಲೇ ಪ್ರಾರಂಭವಾಗಿದೆ ; ಅದು ಬಹುಶಃ 1964-65ರ ಒಳಗೆ ಮುಗಿಯ ಬಹುದು ಎಂದು ಆಶೆ ಮಾಡುತ್ತಾ ಇದ್ದೇವೆ. ಆ ಸ್ಕೀಂ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಲ್ಲ ಅದರ ಸಲುವಾಗಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಂಗಾ ಮೇಲ್ದಂಡೆ ಕಟ್ಟುವುದರಿಂದ ಆ ಭಾಗದ ಜನಗಳಿಗೆ ತೊಂದರೆಯಾಗುತ್ತದೆ ಎಂದು ಸರ್ಕಾರದವರು ಈಗ ಯಾವ ಸ್ಥಳದಲ್ಲಿ ಕಟ್ಟಬೇಕೆಂದು ಯೋಚನೆ ಮಾಡಿದ್ದಾರೋ ಆ ಸ್ಥಳವನ್ನು ಬದಲಾಯಿಸಬೇಕೆಂದು ಆ ಭಾಗದ ಜನರು ಸರ್ಕಾರದವರಿಗೆ, ರೆಪ್ರಸೆಂಟೇಷನ್ ಕೊಟ್ಟಿರುವುದು ನಿಜವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ತುಂಗಾ ಮೇಲ್ದಂಡೆ ಕೆಲಸ ಪ್ರಾರಂಭವಾದ ತಕ್ಷಣ ಜನ ಭಯ ಗೊಂಡು ರೆಪ್ರಸೆಂಟೇಷನ್ ಕಳುಹಿಸಿದ್ದಾರೆ. ನಾವು ಆ ಕಡೆ ಡ್ಯಾಂ ಹಾಕುತ್ತೇವೆ ಎಂದು ಖಚಿತವಾಗಿ ಹೇಳಿಲ್ಲ, ಅನೇಕ ಕಡೆಗಳಲ್ಲಿ ಸ್ಥಳ ಪರಿಶೀಲನೆ ಮಾಡುತ್ತಾ ಇದ್ದೇವೆ. ಎಲ್ಲಿ ಡ್ಯಾಂ ಹಾಕಿದರೆ ಹೆಚ್ಚು ಅನುಕೂಲವಾಗುತ್ತದೆ ಎಂಬುದನ್ನು ನೋಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಸರ್ಕಾರದ ಸ್ಪಷ್ಟವಾದ ನಿಲುವು ಏನು ಎಂಬುದನ್ನು ಹೇಳಬೇಕೆಂದು ಆಶೆಪಡುತ್ತೇನೆ. ತಮಗೆಲ್ಲರಿಗೂ ಗೊತ್ತಿದೆ ಅನೇಕ ಸಲ ಹೇಳಿದ್ದೇನೆ. ಇರಿಗೇಷನ್ ಪೊಟೆಷಿಯಲ್ ನಮ್ಮ ಸಂಸ್ಥಾನದಲ್ಲಿ ಬಹಳ ಲಿಮಿಟೆಡ್, ಇದೆ, ಬಹುಶಃ ಎಲ್ಲಾ ನೀರನ್ನೂ ಉಪಯೋಗ ಮಾಡಿದರೂ 28 ಪರ್ಸೆಂಟಿಗಿಂತ ಹೆಚ್ಚು ನೀರು ಸಿಕ್ಕುವ ಹಾಗಿಲ್ಲ. ಆದಕ್ಕೆ ಪ್ರತಿಯೊಂದು ತೊಟ್ಟು ನೀರನ್ನೂ ನಾವು ಬಳಸಿಕೊಳ್ಳಲು ಪ್ರಯತ್ನ ಮಾಡ ಬೇಕಾಗಿದೆ. ಅದರ ಸಲುವಾಗಿ ನಮ್ಮ ಸಂಸ್ಥಾನದಲ್ಲಿ ಇರುವಂತಹ ಎಲ್ಲಾ ಸ್ಥಳ ಪರಿಶೀಲನೆ ಮಾಡಿ ಯಾವ ಯಾವ ಪ್ರಾಜೆಕ್ಟು ಆಗುವುದಕ್ಕೆ ಸಾಧ್ಯವಿದೆ ಎಂಬುದರ ಒಂದು ಬ್ಲೂ ಪ್ರಿಂಟ್ ತಯಾರು ಮಾಡಬೇಕೆಂದು ಹೇಳಿ ಒಂದು ಇನ್‌ವೆಸ್ಟಿಗೇಷನ್ ಸರ್ಕಲ್‌ನ್ನು ತೆಗೆದು ಅದಕ್ಕೆ ಬೇಕಾದ ಸಿಬ್ಬಂದಿ ಯನ್ನು ಹಾಕಿದ್ದೇವೆ, ಅವರು ಎಲ್ಲಾ ಸ್ಥಳಗಳನ್ನೂ ಇನ್‌ವೆಸ್ಟಿಗೇಟ್ ಮಾಡುತ್ತಾ ಇದ್ದಾರೆ. ಆ ರೀತಿ ಮಾಡುತ್ತಾ ಇರುವ ಕಾಲಕ್ಕೆ ಜನ ಭಯಪಟ್ಟುಕೊಂಡು ಒಂದೇ ಸಮನಾಗಿ ರೆಪ್ರಸೆಂಟೇಷನ್ ಗಳನ್ನು ಕೊಡುತ್ತಾ ಇದ್ದಾರೆ. ಇದು ಯಾವುದೂ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಲ್ಲ ಇದೆಲ್ಲಾ ಇನ್‌ವೆಸ್ಟಿಗೇಷನ್ ಆಗಿ ಬ್ಲೂ ಪ್ರಿಂಟ್ ತಯಾರು ಮಾಡಿದ ಮೇಲೆ ಪ್ರಾಜೆಕ್ಟ್ ರಿಪೋರ್ಟ್‌ನ್ನು ತರಿಸಿಕೊಂಡು ಅದನ್ನು ನಮ್ಮ ಹತ್ತಿರ ಇಟ್ಟುಕೊಂಡು ಯಾವಾಗಲಾದರೂ ಏನಾದರೂ ಒಂದು ಪರಿಸ್ಥಿತಿ ಬಂದಾಗ ಈ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ ಎಂದು ಕೇಂದ್ರ ಸರ್ಕಾರದವರಿಗೆ ಹೇಳುವುದಕ್ಕೋಸ್ಕರ ಇಷ್ಟೆಲ್ಲಾ ಮಾಡುತ್ತಾ ಇದ್ದೇವೆ.

ಶ್ರೀ ಸಂಜೀವನಾಥ ಐಕಳ.—ತುಂಗಭದ್ರಾ ಮೇಲ್ದಂಡೆ ಪ್ರಾಜೆಕ್ಟ್‌ನ್ನು ತೆಗೆದುಕೊಂಡು ತೀರ್ಥಹಳ್ಳಿಯ ಹತ್ತಿರ ಡ್ಯಾಂ ಕಟ್ಟಬೇಕೆಂದಿದ್ದಾಗ ಅಲ್ಲಿಯ ಜನರಿಂದ ಆಕ್ಷೇಪಣೆ ಬಂದು ಅದನ್ನು ಶ್ರೀಂಗೇರಿಯ ಹತ್ತಿರ ಬೇರೊಂದು ಸ್ಥಳದಲ್ಲಿ ಕಟ್ಟಬೇಕೆಂದು ಅಲ್ಲಿನ ಜನರು ಕೊಟ್ಟ ಮನವಿಯನ್ನು ಪರಿಶೀಲನೆ ಮಾಡಿದ್ದೀರಾ ? ಮಾಡಿದ್ದರೆ ಅದರ ಫಲತಾಂಶವೇನು ?

ಶ್ರೀ ವೀರೇಂದ್ರ ಪಾಟೀಲ್.—ನಾವು ಚರ್ಚೆ ಮಾಡುತ್ತಾ ಇರುವುದು ತುಂಗಭದ್ರಾ ಮೇಲ್ದಂಡೆ ಅಲ್ಲ, ತುಂಗಾ ಮೇಲ್ದಂಡೆ. ತುಂಗಾ ಮೇಲ್ದಂಡೆಯ ಬಗ್ಗೆ ಆಗಲೇ ಹೇಳಿದೆ ಅದನ್ನು ಎಲ್ಲ ಕಟ್ಟ ಬೇಕೆಂಬುದನ್ನು ಖಚಿತವಾಗಿ ನಿರ್ಧರ ಮಾಡಿಲ್ಲ. ಅನೇಕ ಸ್ಥಳಗಳನ್ನು ಪರಿಶೀಲನೆ ಮಾಡುತ್ತಾ

ಇದ್ದೇವೆ. ಎಲ್ಲಿ ಕಟ್ಟುವುದರಿಂದ ಬಹಳ ಅನುಕೂಲವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡುವುದಕ್ಕಾಗಿ ಹೇಳಿದ್ದೇವೆ, ನಮ್ಮ ಹತ್ತಿರ ರಿಪೋರ್ಟ್ ಬರುವವರೆಗೂ ಇಂತಹ ಕಡೆಯಲ್ಲೇ ಕಟ್ಟುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಎರಡು ಯೋಜನೆಗಳು ಎಷ್ಟು ವರ್ಷಗಳಿಂದ ಪರಿಶೀಲನೆಯಲ್ಲಿ ಇವೆ ?

ಶ್ರೀ ವೀರೇಂದ್ರ ಪಾಟೀಲ್.—ಮೊನ್ನೆ ಮೊನ್ನೆ ಇನ್‌ವೆಸ್ಟಿಗೇಷನ್ ಸರ್ಕಲ್ ಮಾಡಿದ್ದೇವೆ ಅವರು ಆ ಕೆಲಸ ಮಾಡುತ್ತಾ ಇದ್ದಾರೆ. ವರ್ಷಾನುಗಟ್ಟಲೆ ಏನೂ ಆಗಿಲ್ಲ ಎಂದು ನನಗೆ ಅನಿಸುತ್ತದೆ. ಯಾವ ತಾರೀಖಿನಿಂದ ಪ್ರಾರಂಭಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

Sri S. S. KOLKEBAIL.—Is it not a fact that the Varahi Hydro-electric Scheme has been blessed by the Central Government as it is the cheapest scheme ?

Sri VEERENDRA PATIL.—I cannot say off-hand whether it is going to be the cheapest one. According to the preliminary investigation, it has got a generating capacity of 2.25 lakh KW.

Sri G. V. GOWDA.—Is it not a fact that one of the officers of the Planning Commission who inspected the spot where the Varahi Scheme is investigated, has sent a report to the Government that it is a feasible and cheapest project and top priority has to be given to it ?

Sri VEERENDRA PATIL.—I am not aware of any such report. So far as the State Government is concerned and the Government of India is concerned, they are all very keen that after Sharavati we should take up the Kalinadhi Project. We have already completed the invistigation, investigation report is ready and it is also being scrutinised. I think within a period of three to five weeks we will be in a position to send the report to the Government of India. And whenever the officers of the Irrigation and Power Minister and the Union Minister for Irrigation and Power had on occasion to discuss with us and the Chief Minister, they have been all along expressing that we should take up the Kalinadhi project as early as possible.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರತಿ ಸಾರಿ ಈ ನೀರಾವರಿ ಯೋಜನೆಗಳ ಪ್ರಶ್ನೆ ಬಂದಾಗಲೂ ಇವೆಲ್ಲಾ ಇನ್‌ವೆಸ್ಟಿಗೇಷನ್‌ನಲ್ಲಿ ಇವೆ ಎಂದು ಹೇಳುತ್ತೀರಿ. ಎಷ್ಟು ಉಪಯೋಗಿಸಿಕೊಳ್ಳಬೇಕೋ ಅಷ್ಟು ಉಪಯೋಗಿಸಿಕೊಂಡರೂ 28 ಪರ್ಸೆಂಟ್‌ನಷ್ಟು ನೀರು ಸಿಕ್ಕಬಹುದು ಎಂದು ಹೇಳುತ್ತಾ ಇದ್ದೀರಿ. ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಈ ರೀತಿ ಮಾಡುತ್ತಾ ಹೋದರೆ ಇನ್ನು ಎಷ್ಟುಕಾಲ ಬೇಕಾಗುತ್ತದೆ ಎಂಬುದನ್ನು ಅಂದಾಜು ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ಕಾಲ ಬೇಕಾಗುತ್ತದೆ ಎಂಬ ವಿಷಯ ಅಲ್ಲ. ನಮ್ಮ ಹತ್ತಿರ ಎಷ್ಟು ದುಡ್ಡು ಇದೆ ಎಂಬುದರ ಮೇಲೆ ಅದು ಹೋಗುತ್ತದೆ. ನಮ್ಮ ಹತ್ತಿರ ದುಡ್ಡು ಇದ್ದರೆ ಅದಷ್ಟು ಜಾಗ್ರತೆ ಅಷ್ಟು ನೀರನ್ನೂ ಉಪಯೋಗ ಮಾಡಿಕೊಳ್ಳಬಹುದು. ದುಡ್ಡು ಇಲ್ಲದೇ ಇದ್ದರೆ ಹತ್ತಾರು ವರ್ಷಗಳು ಆಗಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ದೇಶಕ್ಕೆ ಇರತಕ್ಕ ಆದಾಯ ಎಷ್ಟು, ನೀರಾವರಿಗೆ ಎಷ್ಟು ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ, ಎಷ್ಟು ಪರ್ಸೆಂಟ್ ನೀರನ್ನು ತಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ಇದುವರೆಗೂ ಅಂದಾಜು ಮಾಡಿಲ್ಲವೇ, ಬುದ್ಧೀ ?

Mr. SPEAKER.—The Hon'ble Member must remember that we are dealing with specific points, but he is simply generalising. He wants the Government to prepare estimates not only with regard to this scheme, but also with regard to unthought of schemes. I disallow it.

1-00 P.M.

Sri H. R. KESHAVA MURTHY.—Is it a fact that by taking this Upper Tunga Project, fertile bits of black cotton soil, acquire alkalinity, and that there is going to be alkaline soil on account of the seepage water? Have they investigated that point?

Sri VEERENDRA PATIL.—I have not yet received the investigation report. These are all matters to be taken into consideration before preparing the project report.

ಶ್ರೀ ಎಸ್. ಗೋಪಾಲ ಗೌಡ.—ತುಂಗಾ ಅಣೆಕಟ್ಟನ್ನು ಕಟ್ಟುತ್ತೇವೆಂಬ ಕಾರಣದಿಂದಾಗಿ ಮುಡಬು ಸೇತುವೆ ಮತ್ತು ಪರ್ತನುತ್ತೂರು ಸೇತುವೆ—ಇವುಗಳ ಕೆಲಸವನ್ನು ಅನಿರ್ದಿಷ್ಟಕಾಲ ಕೈಬಿಟ್ಟಿರುವುದರಲ್ಲಿ ಸರ್ಕಾರದ ಉದ್ದೇಶವೇನು ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ತಿಳಿದಮಟ್ಟಿಗೆ ಇದಕ್ಕೂ ತಾವು ಹೇಳುವುದಕ್ಕೂ ಯಾವ ಸಂಬಂಧವೂ ಇಲ್ಲ.

Revenue Survey work in the State.

* *Q.*—225. Sri J. P. SARWESH [on behalf of SRI V. S. LAKSHMIKANTAPPA (Sagar)].—

'Will the Government be pleased to state :—

(*a*) the date of last Revenue Survey in the State ;

(*b*) the time required to take up fresh Re-survey works in the State ?

A.—Sri B. D. JATTI (Minister for Finance) [on behalf of SRI M. V. KRISHNAPPA (Minister for Revenue)].—

(*a*) Old Mysore area	...	1921
Bombay-Karnatak area	...	1887
Hyderabad-Karnatak area	...	1882
Madras-Karnatak area	...	1925-27
Coorg area	...	1911-1915

(*b*) The question of taking up Re-survey in settled villages has been given up in view of the necessity to introduce revised settlement expeditiously and the large expenditure and time likely to be involved on measurement and Boundary Marks inspections.

Sri J. P. SARWESH.—Do the Government consider that re-survey is necessary to avoid many boundary disputes and to draw up new survey sketches in place of the old and spoilt sketches ?

Sri B. D. JATTI.—Government have thought it necessary to introduce revised settlement and enquiries are being carried on.

ಶ್ರೀ ಬಿ. ಭಾನ್ಯಾ ಶೆಟ್ಟಿ.—ಮುದ್ರಾಸು ಕರ್ನಾಟಕ ಪ್ರದೇಶದಲ್ಲಿ 1934ರಲ್ಲಿ ಸರ್ವೆ ಸೆಟ್ಲ್‌ಮೆಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ ?

Sri B. D. JATTI.—I have no idea.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಳೆಯ ಮೈಸೂರಿನಲ್ಲಿ ಸರ್ವೆ ಸೆಟ್ಲ್‌ಮೆಂಟ್ 1921ರಲ್ಲಿ ಆಗಿತ್ತು ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಆದರೆ 1931ರಲ್ಲಿ ಒಂದು ಸಲ ಆಗಿರಲಿಲ್ಲವೆ ?